# ವಚನ ಸಾಹಿತ್ಯದಲ್ಲಿ ಹಸಿರು ಚಿಂತನೆ ಮತ್ತು ಪರಿಸರ ಪ್ರಜ್ಞೆ

ಬಸಯ್ಯ ಸ್ವಾಮಿ
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು.

DOI: https://doi.org/10.5281/zenodo.18775197

## ABSTRACT:

ವಚನ ಸಾಹಿತ್ಯವು ಕೇವಲ ಭಕ್ತಿಪರ ಅಥವಾ ಸಾಮಾಜಿಕ ಸುಧಾರಣೆಯ ಅಭಿವ್ಯಕ್ತಿಯಷ್ಟೇ ಅಲ್ಲದೆ, ಮಾನವ–ಪ್ರಕೃತಿ ಸಂಬಂಧವನ್ನು ಆಳವಾಗಿ ಚಿಂತಿಸುವ ಸಮಗ್ರ ಜೀವನ ತತ್ತ್ವವನ್ನು ಒಳಗೊಂಡಿದೆ. ಬಸವಣ್ಣನವರಿಂದ ಆರಂಭಗೊಂಡ ಶರಣ ಪರಂಪರೆಯ ವಚನಗಳಲ್ಲಿ ಪ್ರಕೃತಿ, ಜೀವಜಾಲ, ನೆಲ–ನೀರು–ಗಾಳಿ–ಅಗ್ನಿ ಮೊದಲಾದ ಪಂಚಭೂತಗಳೊಂದಿಗೆ ಮಾನವನ ನೈತಿಕ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಲೇಖನವು ವಚನ ಸಾಹಿತ್ಯದಲ್ಲಿರುವ ಹಸಿರು ಚಿಂತನೆ ಮತ್ತು ಪರಿಸರ ಪ್ರಜ್ಞೆಯನ್ನು ತಾತ್ವಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಯಾಮಗಳಲ್ಲಿ ವಿಶ್ಲೇಷಿಸುತ್ತದೆ. ಶರಣರ ವಚನಗಳು ಪ್ರಕೃತಿಯನ್ನು ಕೇವಲ ಉಪಯೋಗದ ವಸ್ತುವಾಗಿ ನೋಡದೆ, ಮಾನವನ ಅಸ್ತಿತ್ವದ ಅವಿಭಾಜ್ಯ ಅಂಗವಾಗಿ ಪರಿಗಣಿಸುತ್ತವೆ ಎಂಬುದನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ. ಆಧುನಿಕ ಪರಿಸರ ಸಂಕಟಗಳ ಹಿನ್ನೆಲೆಯಲ್ಲಿ ವಚನ ಸಾಹಿತ್ಯವು ನೀಡುವ ಪರಿಸರ ನೈತಿಕತೆ, ಸಂಯಮ, ಸಮತೋಲನ ಮತ್ತು ಸಹಜ ಜೀವನದ ಸಂದೇಶಗಳು ಇಂದಿನ ಕಾಲಕ್ಕೂ ಅತ್ಯಂತ ಪ್ರಸ್ತುತವಾಗಿವೆ ಎಂಬುದನ್ನು ಈ ಲೇಖನ ತೋರಿಸುತ್ತದೆ.

## KEYWORDS:

ವಚನ ಸಾಹಿತ್ಯ, ಹಸಿರು ಚಿಂತನೆ, ಪರಿಸರ ಪ್ರಜ್ಞೆ, ಶರಣ ಪರಂಪರೆ, ಪರಿಸರ ನೈತಿಕತೆ, ಭಾರತೀಯ ಜ್ಞಾನ ಪರಂಪರೆ.

## ಪ್ರಸ್ತಾವನೆ:

ಪ್ರಕೃತಿಯನ್ನು ಮನುಷ್ಯನ ಭೋಗದ ವಸ್ತುವೆಂದು ನೋಡದೆ, ಅದನ್ನು ದೈವತ್ವದ ಅಭಿವ್ಯಕ್ತಿ ಎಂದು ಪರಿಗಣಿಸುವ ಉನ್ನತ ಸಿದ್ಧಾಂತವೇ 'ಹಸಿರು ಚಿಂತನೆ'. ಇದು "ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸುವ" ತಾತ್ವಿಕತೆಯಾಗಿದ್ದು, ಪ್ರಕೃತಿಯ ಪ್ರತಿಯೊಂದು ಅಣುವಿನಲ್ಲೂ ಜೀವಕಳೆಯನ್ನು ಕಾಣುತ್ತದೆ. ಮನುಷ್ಯನು ಪ್ರಕೃತಿಯ ಯಜಮಾನನಲ್ಲ, ಬದಲಿಗೆ ಅದರ ಒಂದು ಅವಿಭಾಜ್ಯ ಅಂಗ ಎಂಬ 'ಜೀವಕೇಂದ್ರಿತ' (Biocentric) ದೃಷ್ಟಿಕೋನವೇ ಈ ಚಿಂತನೆಯ ಮೂಲಾಧಾರವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಯಲ್ಲಿ ಪ್ರಕೃತಿಯನ್ನು ಪೂಜನೀಯ ಭಾವದಿಂದ ನೋಡಲಾಗುತ್ತಿತ್ತು. ಮನುಷ್ಯನ ಅಸ್ತಿತ್ವಕ್ಕೆ ಮೂಲಾಧಾರವಾದ ಗಾಳಿ, ನೀರು, ಮಣ್ಣು ಮತ್ತು ಸಸ್ಯಸಂಕುಲಗಳು ಕೇವಲ ಭೌತಿಕ ವಸ್ತುಗಳಲ್ಲ; ಅವು ನಮ್ಮ ಜೀವದ ಆಧಾರಸ್ತಂಭಗಳು ಎಂಬ ಸತ್ಯವನ್ನು ಇಂದು ವಿಜ್ಞಾನ ಜಗತ್ತು ಒಪ್ಪಿಕೊಂಡಿದೆ.

ಪರಿಸರ ಪ್ರಜ್ಞೆಯು ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ

ಮಾನವನಿಗಿರುವ ನೈತಿಕ ಜವಾಬ್ದಾರಿಯ ಅರಿವಾಗಿದೆ. ಇದು ಭೂಮಿಯ ಸಂಪನ್ಮೂಲಗಳನ್ನು ಸ್ವಾರ್ಥಕ್ಕಾಗಿ ಬಳಸುವ 'ಆಸೆ'ಯನ್ನು ಬಿಟ್ಟು, ಅಗತ್ಯಕ್ಕೆ ತಕ್ಕಂತೆ ಬಳಸುವ 'ಸಂಯಮ' ಮತ್ತು 'ಮಿತಬಳಕೆ'ಯನ್ನು ಬೋಧಿಸುತ್ತದೆ. ಪರಿಸರಕ್ಕೆ ಹಾನಿಯಾದರೆ ಅದು ಮನುಷ್ಯನ ಅಸ್ತಿತ್ವಕ್ಕೇ ಸಂಚಕಾರ ಎಂಬ ವೈಜ್ಞಾನಿಕ ಸತ್ಯವನ್ನು ಆಧ್ಯಾತ್ಮಿಕ ಶಿಸ್ತಿನೊಂದಿಗೆ ಅನ್ವಯಿಸಿಕೊಳ್ಳುವುದೇ ನಿಜವಾದ ಪರಿಸರ ಪ್ರಜ್ಞೆಯಾಗಿದೆ.

ಇಂದು ಜಗತ್ತು 'ಜಾಗತಿಕ ತಾಪಮಾನ' ಮತ್ತು ಹವಾಮಾನ ವೈಪರೀತ್ಯದಂತಹ ಭೀಕರ ಸಂಕಟಗಳನ್ನು ಎದುರಿಸುತ್ತಿದೆ. ಮಿತಿಮೀರಿದ ಆಸೆ ಮತ್ತು ಸಂಪನ್ಮೂಲಗಳ ಶೋಷಣೆಯಿಂದ ಭೂಮಿಯ ಸಮತೋಲನ ತಪ್ಪಿರುವ ಈ ಸಂದರ್ಭದಲ್ಲಿ, ಹನ್ನೆರಡನೇ ಶತಮಾನದ ವಚನಕಾರರ ಚಿಂತನೆಗಳು ಅತ್ಯಂತ ಪ್ರಸ್ತುತವೆನಿಸುತ್ತವೆ. ಶರಣರು ಅಂದೇ ಸಾರಿದ "ಆಸೆ ಅನಿಷ್ಟದ ಮೂಲ" ಎಂಬ ತತ್ವ ಮತ್ತು ಸಾಮರಸ್ಯದ ಬದುಕು ಇಂದಿನ ಬಿಕ್ಕಟ್ಟಿಗೆ ರಾಮಬಾಣದಂತಿದೆ.

ಶಿವಶರಣರು ಕೇವಲ ಸಮಾಜ ಸುಧಾರಕರಷ್ಟೇ ಅಲ್ಲ, ಅವರು ಅದ್ಭುತ ಪರಿಸರ ಪ್ರೇಮಿಗಳೂ ಆಗಿದ್ದರು. ಅವರ ದೃಷ್ಟಿಯಲ್ಲಿ "ಪ್ರಕೃತಿಯೇ ದೇವರು". ಅಕ್ಕಮಹಾದೇವಿ ಪ್ರಕೃತಿಯ ಚರಾಚರಗಳಲ್ಲಿ ಪರಶಿವನನ್ನು ಕಂಡರೆ, ಬಸವಣ್ಣನವರು ಸಕಲ ಜೀವರಾಶಿಗಳ ಮೇಲೆ ದಯೆ ತೋರಿಸುವುದೇ ಧರ್ಮದ ಪರಮ ಗುರಿ ಎಂದರು. ಅವರ ಈ ಹಸಿರು ಚಿಂತನೆಯು ಕೇವಲ ಸಿದ್ಧಾಂತವಾಗಿರದೆ, ಒಂದು ಬದುಕುವ ಕ್ರಮವಾಗಿತ್ತು. ಈ ಹಿನ್ನೆಲೆಯಲ್ಲಿ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಹಾಗೂ ಜೇಡರ ದಾಸಿಮಯ್ಯನವರ ಆಯ್ದ ಕೆಲವು ವಚನಗಳ ಮೂಲಕ ಪರಿಸರ ಸಂರಕ್ಷಣೆ ಮತ್ತು ಜೀವಿಗಳ ನಡುವಿನ ಸಮಾನತೆಯನ್ನು ಈ ಲೇಖನವು ವಿಶ್ಲೇಷಿಸಲು ಪ್ರಯತ್ನಿಸುತ್ತದೆ.

## ಮಹಾ ಮಾನವತಾವಾದಿಯಾದ ಬಸವಣ್ಣನವರ ದಯಾ ಸಿದ್ಧಾಂತ

ಬಸವಣ್ಣನವರ ದೃಷ್ಟಿಯಲ್ಲಿ ಧರ್ಮ ಎಂಬುದು ಕೇವಲ ಆಚರಣೆಯಲ್ಲ, ಅದು ಮನುಷ್ಯನ ಅಂತಃಕರಣದ ಅಭಿವ್ಯಕ್ತಿ. ಅವರ ಒಂದು ಪ್ರಸಿದ್ಧ ವಚನ ಹೀಗಿದೆ:

**ದಯವಿಲ್ಲದ ಧರ್ಮವದೇವುದಯ್ಯಾ**
**ದಯವೇ ಬೇಕು ಸರ್ವಪ್ರಾಣಿಗಳೆಲ್ಲರಲ್ಲಿ.**
**ದಯವೇ ಧರ್ಮದ ಮೂಲವಯ್ಯಾ,**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.**
**(ಸಮಗ್ರ ವಚನ ಸಂಪುಟ: 1, ವಚನದ ಸಂಖ್ಯೆ: 247)**

ಈ ವಚನದಲ್ಲಿ ಬಸವಣ್ಣನವರು 'ಸಕಲ ಪ್ರಾಣಿಗಳು' ಎಂಬ ಪದವನ್ನು ಬಳಸಿದ್ದಾರೆ. ಇಲ್ಲಿ ದಯೆಯು ಕೇವಲ ಮನುಷ್ಯರಿಗಷ್ಟೇ ಸೀಮಿತವಾಗಿಲ್ಲ; ಅದು ಪ್ರಾಣಿ, ಪಕ್ಷಿ, ಕ್ರಿಮಿಕೀಟ ಮತ್ತು ಸಸ್ಯಸಂಕುಲವನ್ನೂ ಒಳಗೊಂಡಿದೆ. ಹಸಿರು ಚಿಂತನೆಯ ಮೂಲತತ್ವವೇ ಇದು–ಪರಿಸರದ ಪ್ರತಿಯೊಂದು ಜೀವಿಯೂ ಗೌರವಕ್ಕೆ ಅರ್ಹ ಎಂಬುದು. ಗಿಡವೊಂದನ್ನು ಕಡಿಯುವಾಗ ಅಥವಾ ಪ್ರಾಣಿಯೊಂದನ್ನು

ಹಿಂಸಿಸುವಾಗ ಮನುಷ್ಯನಿಗೆ 'ದಯೆ' ಇರಬೇಕು. ಈ ದಯೆ ಇಲ್ಲದಿದ್ದರೆ ನಾವು ಮಾಡುವ ಯಾವುದೇ ಪೂಜೆ ಅಥವಾ ಧರ್ಮಕ್ಕೆ ಬೆಲೆಯಿಲ್ಲ ಎಂದು ಅವರು ಎಚ್ಚರಿಸುತ್ತಾರೆ.

ವೈಜ್ಞಾನಿಕವಾಗಿ ಹೇಳುವುದಾದರೆ, ಪರಿಸರ ವ್ಯವಸ್ಥೆಯಲ್ಲಿ (Ecosystem) ಪ್ರತಿಯೊಂದು ಜೀವಿಯೂ ತನ್ನದೇ ಆದ ಪಾತ್ರವನ್ನು ಹೊಂದಿದೆ. ಬಸವಣ್ಣನವರು ಅಂದೇ "ದಯವಿಲ್ಲದ ಧರ್ಮವದೇವುದಯ್ಯಾ" ಎಂದು ಪ್ರಶ್ನಿಸುವ ಮೂಲಕ, ಪ್ರಕೃತಿಯನ್ನು ಹಿಂಸಿಸಿ ಪಡೆಯುವ ಯಾವುದೇ ಮೋಕ್ಷವು ನಿರರ್ಥಕ ಎಂದು ಸಾರಿದ್ದಾರೆ. ಗಿಡವೊಂದನ್ನು ಕಡಿಯುವಾಗ ಅಥವಾ ಪ್ರಾಣಿಯೊಂದನ್ನು ಶೋಷಿಸುವಾಗ ಮನುಷ್ಯನಿಗೆ 'ದಯೆ' ಇಲ್ಲದಿದ್ದರೆ ಆತ ಆಧ್ಯಾತ್ಮಿಕವಾಗಿ ಬೆಳೆಯಲು ಸಾಧ್ಯವಿಲ್ಲ ಎಂಬುದನ್ನು ಇಲ್ಲಿ ಹೇಳಲು ಪ್ರಯತ್ನಿಸಿದಂತಿದೆ.

ಅಕ್ಕಮಹಾದೇವಿಯ ಜೀವನ ಮತ್ತು ಸಾಹಿತ್ಯವು ಪರಿಸರದೊಂದಿಗೆ ಕೇವಲ ಸಂಬಂಧವನ್ನಷ್ಟೇ ಅಲ್ಲ, ಒಂದು ರೀತಿಯ 'ಅದ್ವೈತ' (Oneness) ಸಂಬಂಧವನ್ನು ಹೊಂದಿವೆ. ಆಕೆಗೆ ಪ್ರಕೃತಿಯ ಪ್ರತಿಯೊಂದು ಅಣುವಿನಲ್ಲೂ ತನ್ನ ದೈವವಾದ ಚೆನ್ನಮಲ್ಲಿಕಾರ್ಜುನನೇ ಕಾಣಿಸುತ್ತಾನೆ ಎಂಬುದನ್ನು ಅನೇಕ ವಚನಗಳಲ್ಲಿ ವ್ಯಕ್ತಪಡಿಸಿದ್ದಾಳೆ. ಇಲ್ಲಿ ಅಕ್ಕಮಹಾದೇವಿಗೆ ಪ್ರಕೃತಿಯು ತನಗಿಂತ ಬೇರೆಯಾದ ವಸ್ತುವಲ್ಲ. ಅವಳು ಗಿಡಮರಗಳನ್ನು 'ತನ್ನವರು' ಎಂದು ಸಂಬೋಧಿಸುತ್ತಾಳೆ.

**"ಬೆಟ್ಟಕ್ಕೆ ಸಾರವಿಲ್ಲೆಂಬರು**
**ತರುಗಳು ಹುಟ್ಟುವಪರಿ ಇನ್ನೆಂತಯ್ಯಾ?**
**ಇದ್ದಲಿಗೆ ರಸವಿಲ್ಲೆಂಬರು;**
**ಕಬ್ಬುನ ಕರಗುವಪರಿ ಇನ್ನೆಂತಯ್ಯಾ?**
**ಎನಗೆ ಕಾಯವಿಲ್ಲೆಂಬರು; ಚೆನ್ನಮಲ್ಲಿಕಾರ್ಜುನನೊಲಿವಪರಿ ಇನ್ನೆಂತಯ್ಯಾ?"**
**(ಸಮಗ್ರ ವಚನ ಸಂಪುಟ: 5, ವಚನದ ಸಂಖ್ಯೆ: 306)**

ಅಕ್ಕಮಹಾದೇವಿಯ ಈ ವಚನವು ಪ್ರಕೃತಿಯ ಸಹಜ ಗುಣಗಳನ್ನು ಬಳಸಿಕೊಂಡು ಜೀವನದ ಸಾರ್ಥಕತೆಯನ್ನು ಮತ್ತು ತನ್ನ ದೇಹ-ಪರಿಸರದ ನಡುವಿನ ಸಂಬಂಧವನ್ನು ಅತ್ಯಂತ ಮನೋಜ್ಞವಾಗಿ ವಿವರಿಸುತ್ತದೆ. ಬೆಟ್ಟವು ಮೇಲ್ನೋಟಕ್ಕೆ ಕೇವಲ ಕಲ್ಲು-ಮಣ್ಣಿನಿಂದ ಕೂಡಿದ ನೀರಸ ಅಥವಾ ನಿಸ್ಸಾರವಾದ ವಸ್ತುವಿನಂತೆ ಕಂಡರೂ, ಅದರ ಒಡಲಲ್ಲಿ ಮರಗಿಡಗಳನ್ನು ಪೋಷಿಸುವ ಜೀವದ್ರವ್ಯ ಅಡಗಿದೆ; ಇಲ್ಲದಿದ್ದರೆ ಅದರ ಮೇಲೆ ಹಸಿರು ನಳನಳಿಸಲು ಸಾಧ್ಯವಿರಲಿಲ್ಲ. ಹಾಗೆಯೇ, ಕಪ್ಪಾದ ಇದ್ದಿಲು ನಿರ್ಜೀವವಾಗಿ ಕಂಡರೂ, ಕಬ್ಬಿಣವನ್ನೇ ಕರಗಿಸಬಲ್ಲ ಅದ್ಭುತವಾದ ಶಾಖ ಅಥವಾ ಶಕ್ತಿ ಅದರ ಅಂತರಾಳದಲ್ಲಿದೆ. ಇದೇ ತರ್ಕವನ್ನು ಅಕ್ಕಮಹಾದೇವಿಯವರು ಮನುಷ್ಯನ ಕಾಯ ಅಥವಾ ದೇಹಕ್ಕೆ ಅನ್ವಯಿಸುತ್ತಾರೆ. ಲೌಕಿಕ ದೃಷ್ಟಿಯಲ್ಲಿ ದೇಹವು ನಶ್ವರ ಅಥವಾ ಅಶುದ್ಧವಾಗಿ ಕಂಡರೂ, ಈ ಕಾಯವಿಲ್ಲದೆ ದೈವತ್ವವನ್ನು (ಚೆನ್ನಮಲ್ಲಿಕಾರ್ಜುನನನ್ನು) ಒಲಿಸಿಕೊಳ್ಳಲು ಅಥವಾ ಅರಿಯಲು ಸಾಧ್ಯವಿಲ್ಲ. ಇಲ್ಲಿ ಪ್ರಕೃತಿಯ ವಸ್ತುಗಳು ಹೇಗೆ ತನ್ನೊಳಗೆ ಅದೃಶ್ಯ ಶಕ್ತಿಯನ್ನು ಇಟ್ಟುಕೊಂಡಿವೆಯೋ,

ಹಾಗೆಯೇ ಮನುಷ್ಯನ ದೇಹವೂ ಆಧ್ಯಾತ್ಮಿಕ ಸಾಧನೆಗೆ ಅತ್ಯಗತ್ಯವಾದ ಮಾಧ್ಯಮವಾಗಿದೆ. ಈ ಮೂಲಕ ಅಕ್ಕಮಹಾದೇವಿಯವರು ಪ್ರಕೃತಿಯ ಪ್ರತಿ ಅಂಗವೂ ಸಾರಯುಕ್ತವಾದುದು ಮತ್ತು ದೈವದ ಸೃಷ್ಟಿಯಲ್ಲಿ ಯಾವುದೂ ವ್ಯರ್ಥವಲ್ಲ ಎಂಬ ಉನ್ನತ ಪರಿಸರ ಪ್ರಜ್ಞೆಯನ್ನು ಮತ್ತು ದೇಹದ ಪಾವಿತ್ರ್ಯವನ್ನು ಸಮರ್ಥಿಸಿದ್ದಾರೆಂಬುದನ್ನು ಇಲ್ಲಿ ಗಮನಿಸಬಹುದು. ಇದು ಆಧುನಿಕ ಹಸಿರು ಚಿಂತನೆಯ ಪರಮೋಚ್ಚ ಸ್ಥಿತಿ. ಮನುಷ್ಯನು ಪ್ರಕೃತಿಯನ್ನು 'ಬೇರೆ' ಎಂದು ಕಂಡಾಗ ಮಾತ್ರ ಅದನ್ನು ನಾಶಪಡಿಸಲು ಮುಂದಾಗುತ್ತಾನೆ. ಆದರೆ ಅಕ್ಕಮಹಾದೇವಿಯಂತೆ ಪ್ರಕೃತಿಯಲ್ಲೇ ತನ್ನ ಅಸ್ತಿತ್ವವನ್ನು ಕಂಡುಕೊಂಡಾಗ, ಅಲ್ಲಿ ದ್ವೇಷಕ್ಕೆ ಅಥವಾ ವಿನಾಶಕ್ಕೆ ಅವಕಾಶವಿರುವುದಿಲ್ಲ ಎಂಬುದನ್ನು ಮನಗಾಣಬಹುದು.

ವಚನಕಾರರಲ್ಲಿ 'ಅಧ್ಯಾತ್ಮ' ಎಂದರೆ ಪ್ರಕೃತಿಯನ್ನು ಪ್ರೀತಿಸುವುದಾಗಿತ್ತು, ಅದನ್ನು ಅರ್ಥಮಾಡಿಕೊಳ್ಳುವುದಾಗಿತ್ತು ಎನ್ನಬಹುದು. ವಚನಕಾರರ ಪ್ರಕಾರ, ದೇವರು ಗುಡಿಯೊಳಗಿಲ್ಲ, ಅವನು ಈ ಸುಂದರ ಪ್ರಕೃತಿಯಲ್ಲಿದ್ದಾನೆ ಎಂದು ಹುಡುಕಿದ್ದಾರೆ, ಕಂಡಿದ್ದಾರೆ. ಇಂತಹ ಅಂಶವನ್ನು ಅಕ್ಕಮಹಾದೇವಿಯ ವಚನಗಳಲ್ಲಿಯೂ ನೋಡಬಹುದು. ಆಕೆಯ ಪ್ರಕಾರ ಪ್ರಕೃತಿಯಲ್ಲಿಯೇ ಪರಮಾತ್ಮನ ವಾಸಸ್ಥಾನವಿದೆ ಎಂದು ವ್ಯಕ್ತಪಡಿಸುತ್ತಾ, ಪರಿಸರ ಮತ್ತು ಮನುಷ್ಯನ ಅಸ್ತಿತ್ವ ಹೇಗೆ ಬೆಸೆದುಕೊಂಡಿದೆ ಎಂಬುದನ್ನು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದನ್ನು ನೋಡಬಹುದು.

**"ಬೆಟ್ಟದ ಮೇಲೊಂದು ಮನೆಯ ಮಾಡಿ,**
**ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತಡಿಯಲೊಂದು ಮನೆಯ ಮಾಡಿ,**
**ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ,**
**ಶಬ್ದಕ್ಕೆ ನಾಚಿದಡೆಂತಯ್ಯಾ?**
**ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ,**
**ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ**
**ತಾಳದೆ ಸಮಾಧಾನಿಯಾಗಿರಬೇಕು"**

**(ಸಮಗ್ರ ವಚನ ಸಂಪುಟ: 5, ವಚನದ ಸಂಖ್ಯೆ: 307)**

ಅಕ್ಕಮಹಾದೇವಿ ಕಾಡನ್ನೇ ತನ್ನ ಮನೆಯಾಗಿಸಿಕೊಂಡವಳು. ಆಕೆಗೆ ಪ್ರಕೃತಿಯು ಭಯದ ವಸ್ತುವಲ್ಲ, ಬದಲಿಗೆ ರಕ್ಷಣೆಯ ನೆಲೆ. ಮನುಷ್ಯನು ಪ್ರಕೃತಿಯನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಬದಲು ಅದರೊಂದಿಗೆ ಸಾಮರಸ್ಯದಿಂದ ಬದುಕಬೇಕು ಎಂಬ ಸಂದೇಶ ಇಲ್ಲಿದೆ. ಇಲ್ಲಿ ಬೆಟ್ಟ, ಸಮುದ್ರ ಮತ್ತು ಸಂತೆಗಳು ಕೇವಲ ಭೌತಿಕ ಸ್ಥಳಗಳಲ್ಲ; ಅವು ಪರಿಸರದ ವಿವಿಧ ಆಯಾಮಗಳು. ಪ್ರಕೃತಿಯ ಮಡಿಲಲ್ಲಿ ಬದುಕುವುದು ಎಂದರೆ ಪ್ರಕೃತಿಯ ನಿಯಮಗಳಿಗೆ ಒಗ್ಗಿಕೊಳ್ಳುವುದು ಎಂದರ್ಥ. ಆಧುನಿಕ ಪರಿಸರ ವಿಜ್ಞಾನವು ಹೇಳುವ 'Adaptation' ಅಥವಾ ಹೊಂದಾಣಿಕೆಯ ತತ್ವವನ್ನು ಅಕ್ಕನ ಈ ವಚನ ಎತ್ತಿಹಿಡಿಯುತ್ತದೆ.

ವಚನಕಾರರು ಗಹನವಾದ ಆಧ್ಯಾತ್ಮಿಕ ತತ್ವಗಳನ್ನು, ಭಕ್ತಿಯ ರೂಪಗಳನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಲು ಅತಿ ಹೆಚ್ಚು ಬಳಸಿಕೊಂಡಿದ್ದು ಪರಿಸರವನ್ನು (Nature as Metaphor). ಅವರ ದೃಷ್ಟಿಯಲ್ಲಿ ಪ್ರಕೃತಿ ಎಂಬುದು ಕೇವಲ ಮಣ್ಣು–ಕಲ್ಲುಗಳ ರಾಶಿಯಲ್ಲ; ಅದು ಮಾನವನ ಅಂತರಂಗದ ಕನ್ನಡಿ. ಶರಣರಲ್ಲಿ ಮೇರು ಶಿಖರ ಅಲ್ಲಮಪ್ರಭುಗಳು ತಮ್ಮ ಅನೇಕ ವಚನಗಳಲ್ಲಿ ಪ್ರಕೃತಿಯನ್ನು ಪರಿಭಾವಿಸಿಕೊಂಡಿದ್ದಾರೆ. ಪ್ರಕೃತಿಯನ್ನು ಒಟ್ಟು ಮಾಡುವ ಬೆಟ್ಟ–ಬಯಲನ್ನು ವಚನಕಾರರು ತಮ್ಮದೇ ಆದ ರೀತಿಯಲ್ಲಿ ಪ್ರತಿಮೆಯಾಗಿ ಬಳಸಿಕೊಂಡಿದ್ದಾರೆ. ಅಲ್ಲಮನಲ್ಲಿ ಬೆಟ್ಟ ಮತ್ತು ಬಯಲ ಪರಿಕಲ್ಪನೆಯನ್ನು ಈ ಕೆಳಗಿನ ವಚನದಲ್ಲಿ ನೋಡಬಹುದು.

**ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯಾ?**
**ಬಯಲು ಬತ್ತಲೆ ಇದ್ದಡೆ ಏನನುಡಿಸುವರಯ್ಯಾ?**
**ಭಕ್ತನು ಭವಿಯಾದಡೆ ಅದೇನನುಪಮಿಸುವೆನಯ್ಯಾ ಗುಹೇಶ್ವರಾ**

**– ಅಲ್ಲಮಪ್ರಭು**

ಭಕ್ತ–ಭವಿಯ ವ್ಯತ್ಯಾಸಗಳನ್ನು ಗುರುತಿಸುವುದರಲ್ಲಿ ಎಲ್ಲ ವಚನಕಾರರಿಗೂ ತುಂಬ ಆಸಕ್ತಿ. ಬೆಟ್ಟದ ಚಳಿ ಮತ್ತು ಬಯಲ ಬತ್ತಲೆ – ಭವಿಗಳನ್ನು ಕುರಿತ ಅಲ್ಲಮನ ಕೊನೆಯಿಲ್ಲದ ತಿರಸ್ಕಾರವನ್ನು ತಿಳಿಸಲು ಈ ವಚನ ಪ್ರಯತ್ನಿಸುತ್ತಿದೆ. ಬೆಟ್ಟವು ಸಾಧನೆಯ ಅಚಲತೆಯನ್ನು ಸೂಚಿಸಿದರೆ, 'ಬಯಲು' ಎಂಬ ರೂಪಕವು ಸರ್ವವನ್ನೂ ಒಳಗೊಂಡಿರುವ ಶೂನ್ಯ ಅಥವಾ ಅನಂತತೆಯನ್ನು ಸೂಚಿಸುತ್ತದೆ. ಈ ಎರಡೂ ರೂಪಕಗಳು ಮನುಷ್ಯನ ಅರಿವನ್ನು ವಿಸ್ತರಿಸಲು ಪರಿಸರದಿಂದಲೇ ಪಡೆದ ಪಾಠಗಳಾಗಿವೆ.

ಅಲ್ಲಮಪ್ರಭುಗಳು ಪ್ರಕೃತಿಯ ಬೃಹತ್ ರೂಪಗಳನ್ನು ಉದಾಹರಣೆಯಾಗಿ ನೀಡಿ, ಮನುಷ್ಯನ ಅಂತರಂಗದ ಅರಿವು ಎಷ್ಟು ಉನ್ನತವಾಗಿರಬೇಕು ಎಂಬುದನ್ನು ವಿವರಿಸಲು ಈ ವಚನದಲ್ಲಿ ಪ್ರಕೃತಿಯ ಘಟಕಗಳಾದ ಬೆಟ್ಟ ಮತ್ತು ಬಯಲನ್ನು ಬಳಸಿಕೊಂಡಿದ್ದಾರೆ. ಇಲ್ಲಿ ಬೆಟ್ಟ ಎಂಬುದು ಸ್ಥಿರತೆ ಮತ್ತು ಬೃಹತ್ ಗಾತ್ರದ ಸಂಕೇತ. ಬೆಟ್ಟಕ್ಕೆ ಚಳಿಯಾದರೆ ಅದನ್ನು ಮುಚ್ಚುವಷ್ಟು ದೊಡ್ಡ ಹೊದಿಕೆ ಈ ಭೂಮಿಯ ಮೇಲೆ ಎಲ್ಲಿಂದ ಬರಬೇಕು? ಅಂದರೆ, ಪ್ರಕೃತಿಯ ಈ ಬೃಹತ್ ರೂಪಕ್ಕೆ ಮನುಷ್ಯ ನಿರ್ಮಿತ ಸೌಲಭ್ಯಗಳು ಅನ್ವಯಿಸುವುದಿಲ್ಲ. ಮತ್ತು ಬಯಲು ಎಂಬುದು ಅನಂತತೆ ಮತ್ತು ಶೂನ್ಯದ ಸಂಕೇತ. ಬಯಲು ಅಂದರೆ ಆಕಾಶ ಅಥವಾ ಖಾಲಿ ಜಾಗ. ಅದು ಹುಟ್ಟಿನಿಂದಲೇ ಬತ್ತಲೆ (ನಿರಾಕಾರ). ಅದಕ್ಕೆ ಬಟ್ಟೆ ಉಡಿಸಲು ಸಾಧ್ಯವೇ? ಬಯಲಿಗೆ ಬಟ್ಟೆ ಉಡಿಸುವುದು ಎಂದರೆ ಅಸಂಭವವಾದುದನ್ನು ಮಾಡಲು ಹೊರಟಂತೆ ಎಂಬುದನ್ನು ಹೇಳುತ್ತಲೇ "ಭವಿಗಳನ್ನು ಕುರಿತ ಅಲ್ಲಮನ ಕೊನೆಯಿಲ್ಲದ ತಿರಸ್ಕಾರವನ್ನು ಹೇಳುತ್ತದೆ".

ಅಲ್ಲಮಪ್ರಭುಗಳು ತಮ್ಮ ಇನ್ನೊಂದು ವಚನದಲ್ಲಿ ಭಕ್ತ ಮತ್ತು ದೇವರ

ಸಂಬಂಧವನ್ನು ನಿರೂಪಿಸಲು ಪ್ರಕೃತಿಯೊಳಗಿನ ಅನನ್ಯತೆಯನ್ನು ಗುರುತಿಸಿ, ಅವುಗಳನ್ನು ರೂಪಕಗಳಾಗಿ ಬಳಸಿಕೊಂಡಿದ್ದಾರೆ.

**ಶಿಲೆಯೊಳಗಣ ಪಾವಕನಂತೆ**
**ಉದಕದೊಳಗಣ ಪ್ರತಿಬಿಂಬದಂತೆ,**
**ಬೀಜದೊಳಗಣ ವೃಕ್ಷದಂತೆ**
**ಶಬ್ದದೊಳಗಣ ನಿಶ್ಶಬ್ದದಂತೆ,**
**ಗುಹೇಶ್ವರಾ ನಿಮ್ಮ ಶರಣಸಂಬಂಧ**
**(ಸಮಗ್ರ ವಚನ ಸಂಪುಟ: 2, ವಚನದ ಸಂಖ್ಯೆ: 1)**

ಪಂಚಭೂತಗಳ ವಿಶ್ಲೇಷಣೆ: ಅಲ್ಲಮಪ್ರಭುಗಳು ಸೃಷ್ಟಿಯ ಗೂಢತೆಯನ್ನು ವಿವರಿಸುವಾಗ ಪ್ರಕೃತಿಯ ಅದೃಶ್ಯ ಶಕ್ತಿಯನ್ನು ಉದಾಹರಿಸುತ್ತಾರೆ: ಇಲ್ಲಿ 'ಬೀಜದೊಳಗಣ ವೃಕ್ಷ' ಎಂಬ ರೂಪಕವು ಪರಿಸರದ ಪುನರುತ್ಪಾದನಾ ಶಕ್ತಿಯನ್ನು ತೋರಿಸುತ್ತದೆ. ಪ್ರಕೃತಿಯಲ್ಲಿ ಎಲ್ಲವೂ ಅಡಗಿದೆ, ಅದನ್ನು ನೋಡುವ ಕಣ್ಣು ನಮಗಿರಬೇಕು. ಅಲ್ಲಮರು ಶರಣ ಮತ್ತು ಗುಹೇಶ್ವರನ ನಡುವಿನ ಸಂಬಂಧವು ಅತ್ಯಂತ ಅನ್ಯೋನ್ಯವೂ, ಮಾತಿಗೆ ನಿಲುಕದ ಅನಿರ್ವಚನೀಯವೂ ಆದುದೆಂದು ವಿವರಿಸಲು ಈ ವಚನದಲ್ಲಿ ಪ್ರಕೃತಿಯ ಪ್ರತಿಮೆಗಳು ಬಂದಿವೆ. ಅಲ್ಲಮಪ್ರಭುಗಳ ಈ ವಚನವು ಸೃಷ್ಟಿಯ ಆದಿಮ ಸ್ವರೂಪ ಮತ್ತು ಜೀವ-ದೈವದ ನಡುವಿನ ಅವಿನಾಭಾವ ಸಂಬಂಧವನ್ನು ಪ್ರಕೃತಿಯ ಅತ್ಯಂತ ಸೂಕ್ಷ್ಮ ರೂಪಕಗಳ ಮೂಲಕ ಅನಾವರಣಗೊಳಿಸುತ್ತದೆ. ಶಿಲೆಯೊಳಗೆ ಸುಪ್ತವಾಗಿರುವ ಬೆಂಕಿ, ನೀರಿನಲ್ಲಿ ಅಡಗಿರುವ ಪ್ರತಿಬಿಂಬ, ಬೀಜದೊಳಗೆ ಬೃಹತ್ ವೃಕ್ಷವು ಅಡಗಿರುವ ಸ್ಥಿತಿ ಮತ್ತು ಶಬ್ದದ ಅಂತರಾಳದಲ್ಲಿರುವ ನಿಶ್ಶಬ್ದ-ಇವೆಲ್ಲವೂ ಕಣ್ಣಿಗೆ ಕಾಣದಿದ್ದರೂ ಸತ್ಯವಾಗಿರುವ ಪ್ರಕೃತಿಯ ಸಹಜ ಗುಣಗಳು. ಅಂದರೆ, ಪ್ರಕೃತಿ ಮತ್ತು ಪರಮಾತ್ಮ ಹೇಗೆ ಬೇರ್ಪಡಿಸಲಾಗದ ಒಂದೇ ತತ್ವದ ಎರಡು ಮುಖಗಳೋ, ಹಾಗೆಯೇ ಶರಣನು ಪ್ರಕೃತಿಯ ಕಣಕಣದಲ್ಲೂ ದೈವತ್ವವನ್ನು ಕಾಣುತ್ತಾ ಅದರೊಂದಿಗೆ ಸಮರಸವಾಗುತ್ತಾನೆಂಬ ಗೂಢ ಸತ್ಯ ಇಲ್ಲಿ ಸ್ಫುಟಗೊಂಡಿದೆ.

**"ಅಗ್ನಿ ಸುಡಲಲ್ಲದೆ ಸುಳಿಯಲರಿಯದು**
**ವಾಯು ಸುಳಿವುದಲ್ಲದೆ ಸುಡಲರಿಯದು**
**ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು**
**ಈ ಪರಿಯಂತೆ ನರರರಿವರೇ ಕ್ರಿಯಾಜ್ಞಾನಭೇದವ? ರಾಮನಾಥ"**
**(ಸಮಗ್ರ ವಚನ ಸಂಪುಟ: 7, ವಚನದ ಸಂಖ್ಯೆ: 713)**

ಅಗ್ನಿ-ವಾಯುವಿನ ಗುಣಧರ್ಮ ಬೇರೆ ಬೇರೆ. ಆದರೆ ವಾಯುವಿನ ಸಂಗವಿಲ್ಲದೆ ಅಗ್ನಿಗೆ ಅಸ್ತಿತ್ವವೇ ಇಲ್ಲ. ಕ್ರಿಯೆ ಮತ್ತು ಜ್ಞಾನದ ನಡುವಿನ ಸಂಬಂಧವೂ ಹೀಗೆಯೇ. ಇದು ಭವಿಗಳಿಗೆ ತಿಳಿಯುವುದಿಲ್ಲ ಎಂಬುದನ್ನು ಹೇಳಲು ಜೇಡರ ದಾಸಿಮಯ್ಯನವರು ಅಗ್ನಿ ಮತ್ತು ವಾಯುವಿನ ಸಂಬಂಧವನ್ನು ವಿವರಿಸುವಾಗ ಪ್ರಕೃತಿಯ ಅನ್ಯೋನ್ಯತೆಯನ್ನು ಸಾರುತ್ತಾರೆ. ಬೆಂಕಿಯು ಗಾಳಿಯಿಲ್ಲದೆ

ಉರಿಯಲಾರದು. ಇದು ಪರಿಸರದಲ್ಲಿರುವ ಪರಸ್ಪರ ಅವಲಂಬನೆಯನ್ನು (Inter–dependence) ಸೂಚಿಸುತ್ತದೆ. ಒಂದು ಮೂಲವಸ್ತುವಿಗೆ ಹಾನಿಯಾದರೆ ಇಡೀ ಚಕ್ರಕ್ಕೆ ಧಕ್ಕೆಯಾಗುತ್ತದೆ ಎಂಬುದು ಇಂದಿನ ಪರಿಸರ ವಿಜ್ಞಾನದ ವಿಶ್ಲೇಷಣೆಯೂ ಆಗಿದೆ ಎಂಬುದನ್ನು ಇಲ್ಲಿ ಗುರುತಿಸಲು ಸಾಧ್ಯವಿದೆ.

ಇಂದು ಅಭಿವೃದ್ಧಿಯ ಹೆಸರಿನಲ್ಲಿ ಮರಗಳನ್ನು ಕಡಿಯುವಾಗ ನಾವು ಅದನ್ನು ಕೇವಲ 'ಕಚ್ಚಾ ವಸ್ತು' ಎಂದು ನೋಡುತ್ತಿದ್ದೇವೆ. ಆದರೆ ವಚನಕಾರರು ಅದನ್ನು 'ಜೀವಂತ ದೈವ' ಎಂದು ನೋಡಿದರು. ಪ್ರಕೃತಿಯನ್ನು ದೇವಾಲಯವೆಂದು ಭಾವಿಸಿದಾಗ, ನಾವು ಅಲ್ಲಿ ಕಸ ಎಸೆಯಲು ಅಥವಾ ಅದನ್ನು ನಾಶಪಡಿಸಲು ಹಿಂಜರಿಯುತ್ತೇವೆ. ಈ 'ಪರಿಸರ ಆಧ್ಯಾತ್ಮ' ಇಂದಿನ ಪರಿಸರ ಸಂರಕ್ಷಣಾ ಚಳವಳಿಗಳಿಗೆ ಅತ್ಯಂತ ಅವಶ್ಯಕವಾಗಿದೆ. ಪ್ರಕೃತಿಯೇ ದೇವರು ಎಂಬ ಅರಿವು ಮೂಡಿದರೆ, ಅದನ್ನು ಉಳಿಸಲು ಪ್ರತ್ಯೇಕ ಕಾನೂನುಗಳ ಅಗತ್ಯವಿರುವುದಿಲ್ಲ; ಅದು ಪ್ರತಿಯೊಬ್ಬನ ಕರ್ತವ್ಯವಾಗುತ್ತದೆ.

**ಉಪಸಂಹಾರ:**

ಒಟ್ಟಾರೆಯಾಗಿ ಹೇಳುವುದಾದರೆ, ವಚನ ಸಾಹಿತ್ಯವು ಕೇವಲ ಭಕ್ತಿ, ಆಧ್ಯಾತ್ಮ, ದೇವರು, ಧರ್ಮ, ಕಾಯಕ, ಮೌಢ್ಯ ಕಂದಾಚಾರ ಇಂತಹ ಅನೇಕ ವಿಷಯಗಳಲ್ಲಿ ಮಾತನಾಡುವುದಷ್ಟೇ ಅಲ್ಲದೆ, ತಮ್ಮ ವಚನಗಳಲ್ಲಿ ತಮ್ಮ ಅರಿವಿನ ಪರದೆಯಲ್ಲೆ ಪರಿಸರ ಪ್ರತಿಮೆಗಳನ್ನು ಬಳಸಿಕೊಂಡಿರುವ ಹಿನ್ನೆಲೆಯು ಈ ಲೋಕದ ಬದುಕನ್ನು ಹಸನುಗೊಳಿಸುವ ಸುಸ್ಥಿರ ಪರಿಸರ ಪ್ರಜ್ಞೆಯ (Ecological Consciousness) ಮಹಾನ್ ದರ್ಶನದಂತಿವೆ. ಎಂಟು ಶತಮಾನಗಳ ಹಿಂದೆಯೇ ಶರಣರು ಪ್ರತಿಪಾದಿಸಿದ ಸಕಲ ಜೀವಿಗಳ ನಡುವಿನ ಸಮಾನತೆ, ಬಸವಣ್ಣನವರ ಜೀವದಯೆಯ ಸಿದ್ಧಾಂತ ಮತ್ತು ಅಕ್ಕಮಹಾದೇವಿಯವರ ಪ್ರಕೃತಿಯೊಂದಿಗಿನ ಅದ್ವೈತ ಸಂಬಂಧಗಳು ಇಂದಿನ ಆಧುನಿಕ ಪರಿಸರ ವಿಜ್ಞಾನ ಹೇಳುತ್ತಿರುವ ಸತ್ಯಗಳಿಗಿಂತ ಭಿನ್ನವಾಗಿಲ್ಲ. ಸೃಷ್ಟಿಯ ಆದಿಮ ಸ್ವರೂಪವನ್ನು ಶಿಲೆಯೊಳಗಣ ಪಾವಕನಂತೆ ಅಥವಾ ಬೀಜದೊಳಗಣ ವೃಕ್ಷದಂತೆ ಗುರುತಿಸಿದ ಅಲ್ಲಮಪ್ರಭುಗಳ ಚಿಂತನೆಗಳು, ಪ್ರಕೃತಿಯ ಪ್ರತಿ ಅಣುವಿನಲ್ಲೂ ಅಡಗಿರುವ ದಿವ್ಯ ಶಕ್ತಿಯನ್ನು ಗೌರವಿಸಬೇಕೆಂದು ಬೋಧಿಸುತ್ತವೆ. ಪ್ರಕೃತಿ ಸಮತೋಲನ ಕೆಟ್ಟರೆ ಮಾನವಕುಲಕ್ಕೆ ಉಳಿಗಾಲವಿಲ್ಲ ಎಂಬ ವೈಜ್ಞಾನಿಕ ಸತ್ಯವು ಶರಣರ ವಚನಗಳಲ್ಲಿ ದಾರ್ಶನಿಕ ರೂಪದಲ್ಲಿ ಅಡಗಿದ್ದು, "ಹಸಿರೇ ಉಸಿರು" ಎಂಬ ತತ್ವವನ್ನು ಶರಣರು ಅಂದೇ ಒಂದು ಬದುಕುವ ಕ್ರಮವಾಗಿ ಅನುಷ್ಠಾನಕ್ಕೆ ತಂದಿದ್ದರು.

ಇಂದಿನ ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರೀತ್ಯದಂತಹ ಭೀಕರ ಸಂಕಟಗಳಿಗೆ ವಚನಕಾರರು ಸಾರಿದ 'ಮಿತ ಬಳಕೆ' ಮತ್ತು 'ದಾಸೋಹ' ಸಂಸ್ಕೃತಿಯೇ ಅಂತಿಮ ಪರಿಹಾರವಾಗಿದೆ. ಪ್ರಕೃತಿಯನ್ನು ಶೋಷಿಸುವ 'ಯಜಮಾನಿಕೆ'ಯ ಮನಸ್ಥಿತಿಯನ್ನು ಬಿಟ್ಟು, ಪ್ರಕೃತಿಯನ್ನು ಪೂಜಿಸುವ ಮತ್ತು

ಪೋಷಿಸುವ 'ಶರಣ' ಮನಸ್ಥಿತಿಯನ್ನು ನಾವು ಬೆಳೆಸಿಕೊಳ್ಳಬೇಕಿದೆ. ಮರಗಳನ್ನು ನೆಡುವುದು, ಜಲಮೂಲಗಳನ್ನು ರಕ್ಷಿಸುವುದು ಮತ್ತು ಸಕಲ ಜೀವರಾಶಿಗಳ ಬಗ್ಗೆ ಮರುಕ ಹೊಂದುವುದು ನಾವು ವಚನಕಾರರಿಗೆ ಸಲ್ಲಿಸಬಹುದಾದ ನಿಜವಾದ ಗೌರವವಾಗಿದೆ. ವಚನಗಳ ಈ ಹಸಿರು ಬೆಳಕಿನಲ್ಲಿ ನಾವು ಸಾಗಿದರೆ ಮಾತ್ರ, ಈ ಭೂಮಿಯನ್ನು ಮುಂದಿನ ಪೀಳಿಗೆಗೆ ಸುಂದರವಾಗಿ ಮತ್ತು ಸುರಕ್ಷಿತವಾಗಿ ಬಿಟ್ಟುಹೋಗಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. ರಾಘವೇಂದ್ರರಾವ್ ಎಚ್.ಎಸ್. (ಸಂ), (2022), ಶತಮಾನದ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ನಾಗಭೂಷಣಸ್ವಾಮಿ ಓ.ಎಲ್., (2025), ಒಲುಮೆ ಒಕ್ಕದ ಹಾಗೆ, ಮೈಸೂರು: ಅಭಿರುಚಿ ಪ್ರಕಾಶನ.
3. ಆಶಾದೇವಿ ಎಂ.ಎಸ್. (ಸಂ), (2006), ವಚನ ಪ್ರವೇಶಿಕೆ, ಹೆಗ್ಗೋಡು: ಅಕ್ಷರ ಪ್ರಕಾಶನ.
4. ನಾಗಭೂಷಣಸ್ವಾಮಿ ಓ.ಎಲ್. (ಸಂ), (2023), ಬಸವ ವಚನ ವಾಚಿಕೆ, ಮೈಸೂರು: ಅಭಿರುಚಿ ಪ್ರಕಾಶನ.
5. ವಿದ್ಯಾಶಂಕರ ಎಸ್. (ಸಂ), (1997), ವಚನಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
6. ಪ್ರಭುಶಂಕರ, (2009), ಶರಣರ ನೂರೊಂದು ವಚನಗಳು, ಮೈಸೂರು: ಡಿ.ವಿ.ಕೆ. ಮೂರ್ತಿ.
7. ಸಿದ್ಧಲಿಂಗಯ್ಯ ಜಿ.ಎಸ್., (2012), ವಚನ ಸಾಹಿತ್ಯ: ಒಂದು ಹಕ್ಕಿ ನೋಟ, ಬೆಂಗಳೂರು: ಸಪ್ನಾ ಬುಕ್ ಹೌಸ್.
8. ಚಂದ್ರಶೇಖರ ಓ.ಆರ್., (2016), ಕನ್ನಡಕ್ಕೆ ಅನುಭಾವಿಗಳ ಕ್ರಾಂತಿ, ಚನ್ನಪಟ್ಟಣ: ಪಲ್ಲವ ಪ್ರಕಾಶನ.
9. ತಿಪ್ಪೇರುದ್ರಸ್ವಾಮಿ ಎಚ್., (2004), ವಚನ ಸಾಹಿತ್ಯ: ವೈಚಾರಿಕ ಅಧ್ಯಯನ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
10. ರಂಜಾನ್ ದರ್ಗಾ, (2015), ಶರಣರ ಸಮಗ್ರ ಕ್ರಾಂತಿ, ಬಳ್ಳಾರಿ: ಲೋಹಿಯಾ ಪ್ರಕಾಶನ.